ಒ.ಎಸ್. - 103/2017

ಡಿ.ಡಬ್ಲ್ಯು. - 01

**ದಿನಾಂಕ 06-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - ವಾದಿ ಪರ ವಿ.ವಿ.ಆರ್ ವಕೀಲರಿಂದಃ**

ಶಂಕರ ಪೂಜಾರಿ, ನಾನು ಮತ್ತು ಜಾನಕಿ ಶೇಶಿ ಪೂಜಾರ್ತಿಯ ಕವರಿನವರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವು ಶೇಶಿ ಪೂಜಾರ್ತಿಯ ಮಕ್ಕಳು ಎಂದು ತಿಳಿಸಿರುತ್ತಾರೆ. ಶೇಶಿ ಪೂಜಾರ್ತಿ ಯ ತಾಯಿ ಹೆಸರು ಅಬ್ಬಕ್ಕ ಪೂಜಾರ್ತಿ. ಅಂಗಾರ ಪೂಜಾರಿ ನನ್ನ ಮಾವ . ನಾವು ಅಳಿಯ ಸಂತಾನ ಕಟ್ಟನ್ನು ಪಾಲಿಸುತ್ತೇವೆ ಎಂದರೆ ಸರಿ. ಅಂಗಾರ ಪೂಜಾರಿ ಯಾವ ಅಳಿಯ ಸಂತಾನದ ಕುಟುಂಬಕ್ಕೆ ಸೇರಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ನನ್ನ ತಾಯಿ ಶೇಶಿ ಪೂಜಾರ್ತಿ ನನ್ನ ಮಾವ ಅಂಗಾರ ಪೂಜಾರಿಯ ಅಳಿಯ ಸಂತಾನ ಕುಟುಂಬಕ್ಕೆ ಸೇರಿರುತ್ತಾರೆ. ನಾನು ಅಂಗಾರ ಪೂಜಾರಿ ಅಳಿಯ ಸಂತಾನದ ಕಟ್ಟನ್ನು ಪಾಲಿಸುತ್ತೇನೆ ಮತ್ತು ಸೇರಿರುತ್ತೇನೆ. ನನ್ನ ಸಹೋದರ ಶಂಕರ ಪೂಜಾರಿ ಹಾಗು ನನ್ನ ತಂಗಿ ಜಾನಕಿ ಕೂಡ ಅಂಗಾರ ಪೂಜಾರಿ ಅಳಿಯ ಸಂತಾನದ ಕುಟುಂಬದ ಸದಸ್ಯರು. ಅಂಗಾರ ಪೂಜಾರಿ ಅವರ ತಾಯಿ ಅಬಕ್ಕ ಪೂಜಾರ್ತಿಯ ಅಳಿಯ ಸಂತಾನ ಸದಸ್ಯರು ಮತ್ತು ಸದರಿ ಕಟ್ಟಿಗೆ ಸೇರಿರುತ್ತಾರೆ. ನನ್ನ ತಾಯಿ ಶೇಶಿ ಪೂಜಾರ್ತಿ ಮತ್ತು ಅವರ ಅಕ್ಕ ತಂಗಿಯರು ಕೂಡ ಅವರ ತಾಯಿ ಅಬ್ಬಕ್ಕ ಪೂಜಾರ್ತಿ ಯ ಅಳಿಯ ಸಂತಾನ ಕುಟುಂಬಕ್ಕೆ ಸೇರಿರುತ್ತಾರೆ.

ನಿಪಿ-5 ವಿಭಾಗಪತ್ರಕ್ಕೆ ಶೇಶಿ ಪೂಜಾರ್ತಿ ಮತ್ತು ಅಂಗಾರ ಪೂಜಾರಿ ಕುಟುಂಬದವರು ಸೇರಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅಂಗಾರ ಪೂಜಾರಿ ರವರ ತಂಗಿ ತುಂಗು ಪೂಜಾರ್ತಿ ಮತ್ತು ಅವರ ಮಕ್ಕಳು ಮತ್ತು ಶೇಶಿ ಪೂಜಾರ್ತಿ ಸೇರಿರುತ್ತಾರೆ, ಆದರೇ ಶೇಶಿ ಪೂಜಾರ್ತಿಯ ಮಕ್ಕಳು ವಿಭಾಗಪತ್ರಕ್ಕೆ ಪಕ್ಷಗಾರರು ಆಗಿಲ್ಲ. ನಿಪಿ-5 ವಿಭಾಗಪತ್ರವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ವಾದಪತ್ರದಲ್ಲಿ ಹೇಳಿರುವ ನಮ್ಮ ಕುಟುಂಬ ಎಂದರೆ ಅಂಗಾರ ಪೂಜಾರಿ , ತುಂಗು ಪೂಜಾರ್ತಿ, ಶೇಶಿ ಪೂಜಾರ್ತಿ ಮತ್ತು ಲಕ್ಷ್ಮೀ ಪೂಜಾರ್ತಿ. ನಿಪಿ-5 ವಿಭಾಗಪತ್ರ ಮಾಡುವಾಗ ವಾದಿ ಮತ್ತು ಜಾನಕಿ ಪೂಜಾರ್ತಿಯ ಒಪ್ಪಿಗೆ ಪಡೆದಿರುತ್ತೇವೆ. ಅವರ ಒಪ್ಪಿಗೆಯವನ್ನು ವಿಭಾಗ ಪತ್ರ ಮಾಡುವಾಗಲೇ ಪಡೆದಿರುತ್ತೇವೆ . ವಾದಿ ಮತ್ತು ಜಾನಕಿ ಪೂಜಾರ್ತಿಯ ಒಪ್ಪಿಗೆ ಪಡೆದ ಬಗ್ಗೆ ದಾಖಲೆ ಇಲ್ಲ . ವಿಭಾಗಪತ್ರದಲ್ಲಿ ಕಾಣಿಸಿರುವ 23-02-1982 ರಂದು ಆಗಿದೆ ಎಂದು ಹೇಳುವ ಕರಾರಿನ ಬಗ್ಗೆ ನೆನಪಿಲ್ಲ, ಈಗಾಗಲೇ ಸಾಕಷ್ಟು ವರ್ಷಗಳು ಆಗಿದ್ದರಿಂದ ಮರೆತಿದ್ದೇನೆ. ನಾನು ಆ ಕರಾರನ್ನು ನೋಡಿರಬಹುದು ನೆನಪಿಲ್ಲ . ಶೇಶಿ ಪೂಜಾರ್ತಿಯ ಪಾಲಿಗೆ ಒಟ್ಟು ಎಷ್ಟು ಆಸ್ತಿ ಬಂದಿತು ಎಂದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಂದು ಎಕ್ರೆ ಚಿಲ್ಲರೆ ಬಂದಿತು ಎದಯಿ ತಿಳಿಸಿರುತ್ತಾರೆ. ಆ ಒಟ್ಟು 1 ಎಕ್ರೆ ಚಿಲ್ಲರೆಯಲ್ಲಿ ಗದ್ದೆ, ತೋಟ ಮತ್ತು ಕುಸ್ಕಿ ಜಮೀನು ಎಷ್ಟು ಎಂದರೆ ಸಾಕ್ಷಿ ಗುಡ್ಡೆ 47 ಸೆಂಟ್ಸ್ , ಉಳಿದದ್ದು ಯಾವುದು ಎಂದು ದಾಖಲೆಯಲ್ಲಿ ಇರುತ್ತದೆ. ಶೇಶಿ ಪೂಜಾರ್ತಿ ಆಕೆಗೆ ಬಂದ ಆಸ್ತಿಯಲ್ಲಿ 8 ರಿಂದ 10 ಸೆಂಟ್ಸ್ ಜಾಗವನ್ನು ಮಾರಾಟ ಮಾಡಿರಬಹುದು. ಈ ಬಗ್ಗೆ ದಾಖಲೆ ಇರುತ್ತದೆ. ಶೇಶಿ ಪೂಜಾರ್ತಿ ನನಗೆ ಎಷ್ಟು ಆಸ್ತಿಯನ್ನು ವ್ಯವಸ್ಥಾ ಪತ್ರದ ಮುಖೇನ ಕೊಟ್ಟರು ಎಂದು ದಾಖಲೆಯಲ್ಲಿ ಇರುತ್ತದೆ, ನನಗೆ ಈಗ ಗೊತ್ತಿಲ್ಲ . ಶೇಶಿ ಪೂಜಾರ್ತಿ ವ್ಯವಸ್ಥಾ ಪತ್ರದ ಮುಖೇನ ಬಿಟ್ಟು ಕೊಟ್ಟ ನಂತರ ಉಳಿಯಿತು ಎಂದು ನಾನು ಲೆಕ್ಕ ಮಾಡಿ ಹೇಳಬೇಕಾಗಿರುತ್ತದೆ . ಶೇಶಿ ಪೂಜಾರ್ತಿ ಮರಣದ ನಂತರ ವಾದಿ ಶಂಕರ ಪುಜಾರಿಗೆ ಎಷ್ಟು ಅಂಶದ ಹಕ್ಕು ಬಂದಿತು

ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆತನಿಗೆ ಯಾವುದೇ ಹಕ್ಕು ಇಲ್ಲ ಎಂದು ತಿಳಿಸಿರುತ್ತಾರೆ . ಶೇಶಿ ಪೂಜಾರ್ತಿ ಆಕೆಯ ಇಬ್ಬರು ಮಕ್ಕಳಿಗೆ ಆಸ್ತಿಯನ್ನು ಕೊಟ್ಟಿರುತ್ತಾರೆ. ಶೇಶಿ ಪೂಜಾರ್ತಿ ಮೃತಪಟ್ಟ ನಂತರ ಆಕೆಯ ಹೆಸರಿನಲ್ಲಿ ಇದ್ದ ಉಳಿದ ಆಸ್ತಿ ಹಾಗೇಯೇ ಇರುತ್ತದೆ ಅದನ್ನು ಪಾಲು ಮಾಡಿಲ್ಲ .  ಶೇಶಿ ಪೂಜಾರ್ತಿ ಮೃತಪಟ್ಟ ನಂತರ ಆಕೆಯ ಆಸ್ತಿ ವಾದಿ ಶಂಕರ ಪುಜಾರಿಗೆ ಏಕೆ ಬರಲಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಶೇಶಿ ಪೂಜಾರ್ತಿಗೆ ಅಂಗಾರ ಪುಜಾರಿಯಿಂದ ಬಂದ ಆಸ್ತಿಯಾಗಿದ್ದರಿಂದ ಅದು ಆಕೆಯ ಸ್ವಂತ ಆಸ್ತಿಯಾಗಿದ್ದು ಅದನ್ನು ಆಕೆ ನನಗೆ ಮತ್ತು ನನ್ನ ತಂಗಿ ಜಾನಕಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ .

**ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.